**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 997/2021**

**ಪ್ರಾಸಾಃ- 7 ಚಾಸಾಃ- 10**

| | | |
|---|---|---|
| ಸಾಕ್ಷಿಯ ಹೆಸರು | : | ಈರಣ್ಣ |
| ತಂದೆಯ ಹೆಸರು | : | ವೆಂಕೋಬಪ್ಪ |
| ವಯಸ್ಸು | : | 55 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಊಳೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 17.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 1, 4 ಮತ್ತು 11 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ. ಚಾಸಾ 1 ಹರಿಜನ ಜನಾಂಗಕ್ಕೆ ಸೇರಿದ್ದಾನೆ. ಆತನದ್ದು ಊಳೂರು ಗಾಮದಲ್ಲಿ ಜಮೀನು ಇದೆ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ನಾನು ಆರೋಪಿತರು ಹಾಗೂ ಚಾಸಾ 1, 4 ರವರ ನಡುವೆ ನಡೆದ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಮತ್ತು ಅದರ ಬಗೆ ಕೇಳಿ ಸಹ ತಿಳಿದುಕೊಂಡಿಲ್ಲ. ಆರೋಪಿತರು ಚಾಸಾ 1, 4 ಮತ್ತು ಅವರ ಮಕ್ಕಳಿಗೆ ಕುಡುಗೋಲಿನಿಂದ ಮತ್ತು ಕೊಡಲಿ, ಕಲ್ಲಿನಿಂದ ಹೊಡೆದ ಬಗ್ಗೆ ಮತ್ತು ಜಾತಿ ನಿಂದನೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಮು ಮಾ 1 ರಿಂದ 5 ನ್ನು ನಾನು ಈ ಮೊದಲು ನೋಡಿಲ್ಲ. ನಾನು ಈ ಪ್ರಕರಣದಲ್ಲಿ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ಊಳೂರಿನಲ್ಲಿ ನನ್ನ ಯಾವುದೇ ಹೊಲ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).

<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>

ದಿಃ 12-8-2021 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ಚಾಸಾ 1 ಮತ್ತು 4 ರವರು ಸರ್ವೆ ನಂಃ 205 ಎ ಮತ್ತು ಬಿ ರಲ್ಲಿ ಕೆಲಸ ಮಾಡುತ್ತಿದ್ದಾಗ, ಅಗಸರ ಜನಾಂಗದ ಆರೋಪಿ 1 ರಿಂದ 4, ಹರಿಜನ ಜನಾಂಗದ ಆರೋಪಿ 5 ರಿಂದ 9 ರವರು ಅಕ್ರಮ ಕೂಟ ರಚಿಸಿಕೊಂಡು ಬಂದು ಚಾಸಾ 1 ರವರ ಹೊಲದಲ್ಲಿ ಅತಿಕ್ರಮಣ ಪ್ರವೇಶ ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿ 1 ಚಾಸಾ 1 ರವರಿಗೆ ಏನೇಲೇ ಮಾದಿಗ ಸೂಳೇ ಮಗನೇ ನಮ್ಮ ಹೊಲ ಬಿಟ್ಟು ಹೋಗ್ತೀಯಾ ಹಾಗೂ ತಹಸೀಲ್ದಾರ್ ರವರ ಕೇಸನ್ನು ವಾಪಾಸ್ಸು ತೆಗೆದುಕೊಳ್ಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರು ಚಾಸಾ 1 ರವರನ್ನು ಹಿಡಿದುಕೊಂಡು ನಾವು ಹೊಡೆದರೆ ಕೇಸು ಆಗುತ್ತದೆ ಎಂದು ಜೊತೆ ಇದ್ದ ಹರಿಜನ ಜನಾಂಗದ ಆರೋಪಿ 5 ರಿಂದ 9 ರವರಿಗೆ ಚಾಸಾ 1 ಮತ್ತು 4 ಹಾಗೂ ಮಕ್ಕಳನ್ನು ಹೊಡೆದು ಸಾಯಿಸಿ ಬಿಡೋಣ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆಗ 5 ನೇ ಆರೋಪಿ ಮು ಮಾ 1 ಕೊಡಲಿಯಿಂದ ಚಾಸಾ 1 ರವರ ಹಣೆಗೆ ಮತ್ತು ಎರಡೂ ಕೈಗಳಿಗೆ ಹೊಡೆದು ರಕ್ತಗಾಯ ಪಡಿಸಿದ್ದ ಎಂದರೆ ಸರಿಯಲ್ಲ. ಆರೋಪಿ 5 ಅದೇ ಕೊಡಲಿಯನ್ನು ತಿರುಗಿಸಿ ಚಾಸಾ 1 ರವರ ಎಡ ಭುಜಕ್ಕೆ ಹೊಡೆದಿದ್ದ ಎಂದರೆ ಸರಿಯಲ್ಲ. 6 ನೇ ಆರೋಪಿ ಚಾಸಾ 1 ರವರ ಎಡ ಕೈ ತಿರುವಿದ್ದ ಎಂದರೆ ಸರಿಯಲ್ಲ. ಆರೋಪಿ 4 ಚಾಸಾ 1 ರವರಿಗೆ ಈ ಮಾದಿಗ ಸೂಳೇ ಮಗನನ್ನು ಮುಗಿಸಿಬಿಡುತ್ತೇನೆ ಎಂದು ಹೇಳಿ ಕೈಗಳಿಂದ ಹೊಡೆದಿದ್ದ ಎಂದರೆ ಸರಿಯಲ್ಲ. ಮು ಮಾ 1 ರಿಂದ 3 ನ್ನು ಆರೋಪಿತರು ಚಾಸಾ 1 ಮತ್ತು 4 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ್ದರು ಎಂದರೆ ಸರಿಯಲ್ಲ. ಮು ಮಾ 4 ಮತ್ತು 5 ಚಾಸಾ 1 ಘಟನೆ ಸಮಯದಲ್ಲಿ ತೊಟ್ಟಿದ್ದ ಬಟ್ಟೆಗಳಾಗಿವೆ ಎಂದರೆ ಸರಿಯಲ್ಲ. ನಾನು, ಚಾಸಾ 11, 5 ಮತ್ತು 6 ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿ ಜಗಳ ಬಿಡಿಸಿದ್ದೆವು ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ದಿಃ 27-8-2021 ರಂದು ಪೋಲೀಸರ ಮುಂದೆ

ನನಗೆ ಈಗ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಿದ್ದು --- ಸದರಿ ಘಟನೆ ನಡೆದಿರುತ್ತದೆ “ ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

ನಿಪಿ-9 ರಂತೆ ನಾನು ಹೇಳಿಕೆ ಕೊಟ್ಟಿದ್ದರೂ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಪಾಟೀ ಸವಾಲು ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ:- 997/2021**

**ಪ್ರಾಸಾಃ- 8 ಚಾಸಾಃ- 11**

| | | |
|---|---|---|
| ಸಾಕ್ಷಿಯ ಹೆಸರು | : | ಕೋರಿ ನಾಗರಾಜ್ |
| ತಂದೆಯ ಹೆಸರು | : | ದೊಡ್ಡ ಬಸಪ್ಪ |
| ವಯಸ್ಸು | : | 54 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಊಳೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 17.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 1, 4 ರಿಂದ 8 ಮತ್ತು 10 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ. ಚಾಸಾ 1 ಹರಿಜನ ಜನಾಂಗಕ್ಕೆ ಸೇರಿದ್ದಾನೆ. ಆತನದ್ದು ಊಳೂರು ಗಾಮದಲ್ಲಿ ಜಮೀನು ಇದೆ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ನಾನು ಆರೋಪಿತರು ಹಾಗೂ ಚಾಸಾ 1, 4 ರವರ ನಡುವೆ ನಡೆದ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಮತ್ತು ಅದರ ಬಗೆ ಕೇಳಿ ಸಹ ತಿಳಿದುಕೊಂಡಿಲ್ಲ. ಆರೋಪಿತರು ಚಾಸಾ 1, 4 ಮತ್ತು ಅವರ ಮಕ್ಕಳಿಗೆ ಕುಡುಗೋಲಿನಿಂದ ಮತ್ತು ಕೊಡಲಿ, ಕಲ್ಲಿನಿಂದ ಹೊಡೆದ ಬಗ್ಗೆ ಮತ್ತು ಜಾತಿ ನಿಂದನೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಮು ಮಾ 1 ರಿಂದ 5 ನ್ನು ನಾನು ಈ ಮೊದಲು ನೋಡಿಲ್ಲ. ನಾನು ಈ ಪ್ರಕರಣದಲ್ಲಿ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ಊಳೂರಿನಲ್ಲಿ ನನ್ನ ಯಾವುದೇ ಹೊಲ ಇಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲು: ಅಭಿಯೋಜಕರವರಿಂದ:</u>**

ದಿಃ 12-8-2021 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ಚಾಸಾ 1 ಮತ್ತು 4 ರವರು ಸರ್ವೆ ನಂಃ 205 ಎ ಮತ್ತು ಬಿ ರಲ್ಲಿ ಕೆಲಸ ಮಾಡುತ್ತಿದ್ದಾಗ, ಅಗಸರ ಜನಾಂಗದ ಆರೋಪಿ 1 ರಿಂದ 4, ಹರಿಜನ ಜನಾಂಗದ ಆರೋಪಿ 5 ರಿಂದ 9 ರವರು ಅಕ್ರಮ ಕೂಟ ರಚಿಸಿಕೊಂಡು ಬಂದು ಚಾಸಾ 1 ರವರ ಹೊಲದಲ್ಲಿ ಅತಿಕ್ರಮಣ ಪ್ರವೇಶ ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿ 1 ಚಾಸಾ 1 ರವರಿಗೆ ಏನೇಲೇ ಮಾದಿಗ ಸೂಳೇ ಮಗನೇ ನಮ್ಮ ಹೊಲ ಬಿಟ್ಟು ಹೋಗ್ತೀಯಾ ಹಾಗೂ ತಹಸೀಲ್ದಾರ್ ರವರ ಕೇಸನ್ನು ವಾಪಾಸ್ಸು ತೆಗೆದುಕೊಳ್ಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರು ಚಾಸಾ 1 ರವರನ್ನು ಹಿಡಿದುಕೊಂಡು ನಾವು ಹೊಡೆದರೆ ಕೇಸು ಆಗುತ್ತದೆ ಎಂದು ಜೊತೆ ಇದ್ದ ಹರಿಜನ ಜನಾಂಗದ ಆರೋಪಿ 5 ರಿಂದ 9 ರವರಿಗೆ ಚಾಸಾ 1 ಮತ್ತು 4 ಹಾಗೂ ಮಕ್ಕಳನ್ನು ಹೊಡೆದು ಸಾಯಿಸಿ ಬಿಡೋಣ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆಗ 5 ನೇ ಆರೋಪಿ ಮು ಮಾ 1 ಕೊಡಲಿಯಿಂದ ಚಾಸಾ 1 ರವರ ಹಣೆಗೆ ಮತ್ತು ಎರಡೂ ಕೈಗಳಿಗೆ ಹೊಡೆದು ರಕ್ತಗಾಯ ಪಡಿಸಿದ್ದ ಎಂದರೆ ಸರಿಯಲ್ಲ. ಆರೋಪಿ 5 ಅದೇ ಕೊಡಲಿಯನ್ನು ತಿರುಗಿಸಿ ಚಾಸಾ 1 ರವರ ಎಡ ಭುಜಕ್ಕೆ ಹೊಡೆದಿದ್ದ ಎಂದರೆ ಸರಿಯಲ್ಲ. 6 ನೇ ಆರೋಪಿ ಚಾಸಾ 1 ರವರ ಎಡ ಕೈ ತಿರುವಿದ್ದ ಎಂದರೆ ಸರಿಯಲ್ಲ. ಆರೋಪಿ 4 ಚಾಸಾ 1 ರವರಿಗೆ ಈ ಮಾದಿಗ ಸೂಳೇ ಮಗನನ್ನು ಮುಗಿಸಿಬಿಡುತ್ತೇನೆ ಎಂದು ಹೇಳಿ ಕೈಗಳಿಂದ ಹೊಡೆದಿದ್ದ ಎಂದರೆ ಸರಿಯಲ್ಲ. ಮು ಮಾ 1 ರಿಂದ 3 ನ್ನು ಆರೋಪಿತರು ಚಾಸಾ 1 ಮತ್ತು 4 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ್ದರು ಎಂದರೆ ಸರಿಯಲ್ಲ. ಮು ಮಾ 4 ಮತ್ತು 5 ಚಾಸಾ 1 ಘಟನೆ ಸಮಯದಲ್ಲಿ ತೊಟ್ಟಿದ್ದ ಬಟ್ಟೆಗಳಾಗಿವೆ ಎಂದರೆ ಸರಿಯಲ್ಲ. ನಾನು, ಚಾಸಾ 5, 6, 8 ಮತ್ತು 10 ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿ ಜಗಳ ಬಿಡಿಸಿದ್ದೆವು ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ದಿಃ 27-8-2021 ರಂದು ಪೋಲೀಸರ ಮುಂದೆ ನನಗೆ ಈಗ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಿದ್ದು --- ಸದರಿ ಘಟನೆ ನಡೆದಿರುತ್ತದೆ "

ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

ನಿಪಿ-10 ರಂತೆ ನಾನು ಹೇಳಿಕೆ ಕೊಟ್ಟಿದ್ದರೂ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಪಾಟೀ ಸವಾಲು ಇರುವುದಿಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**